ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4732/2023

ಪಿ.ಡಬ್ಲ್ಯೂ -03
ಸಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರುಃ- ಶೇಕ್ ಇಮ್ರಾನ್
ತಂದೆಯ ಹೆಸರುಃ- ಶೇಕ್ ಫರೀದ್
ವಯಸ್ಸುಃ- 35 ವರ್ಷ
ಉದ್ಯೋಗಃ- ಅಭಕಾರಿ ನಿರೀಕ್ಷಕರು
ವಾಸಃ- ಗುಬ್ಬಿ ವಲಯ

**ಸಾಕ್ಷಿಗೆ ದಿಃ26.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು ಜನವರಿ 2019 ರಿಂದ ಅಕ್ಟೋಬರ್ 2019 ರವೆಗೆ ಅಭಕಾರಿ ನಿರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.07.2019 ರಂದು ನಾನು ಚಾಸಾ 7 ರಿಂದ 10 ಅವರೊಂದಿಗೆ ಇಲಾಖಾ ವಾಹನ ಸಂ ಕೆ.ಎ 06-ಜಿ. 897 ನೇ ದರಲ್ಲಿ ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯ ಭೀರಗಾನಹಳ್ಳಿಯಲ್ಲಿ ಗಸ್ತು ಮಾಡುತ್ತಿದ್ದಾಗ ಸುಮಾರು 4 ಗಂಟೆಯ ಸಮಯದಲ್ಲಿ ಚಾಸಾ 1 ನನಗೆ ಕರೆ ಮಾಡಿ ಕುಣಿಗಲ್ ತಾಲ್ಲೂಕಿನ ಹು.ದುರ್ಗ ಹೋಬಳಿಯ ತಾವರೆಕೆರೆ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮುಂಭಾಗ ಹೊನ್ನಗೌಡನ ದೊಡ್ಡಿ ಕ್ರಾಸ್ ಬಳಿ ಇರುವ ಸೋಮಶೇಖರ ಬಿನ್ ರಾಮಣ್ಣ ಅವರ ಪೆಟ್ಟಿಗೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ದೂರು ಬಂದಿದ್ದು ಸದರಿ ದೂರಿನ ಅನ್ವಯ ಜಂಟಿ ದಾಳಿ ಮಾಡಲು ಸೂಚಿಸಿದ ಮೇರೆಗೆ ನಾನು ಚಾಸಾ 7 ರಿಂದ 10 ಎಲ್ಲರೂ ಎಡಿಯೂರು ಹೋಬಳಿಯಿಂದ ಕುಣಿಗಲ್ ಗೆ ಬಂದು ಕುಣಿಗಲ್ ನಿಂದ ಗವಿಮಠ, ಹಿಪ್ಪಾಡಿ ಚೌಡನಕೊಪ್ಪೆ ಮಾರ್ಗವಾಗಿ ತಾವರೆಕೆರೆ ಗ್ರಾಮಕ್ಕೆ ಬಂದು ಅಲ್ಲಿದ ಸ್ಥಳಿಯರನ್ನು ಬರಮಾಡಿಕೊಂಡು ನಮ್ಮನ್ನು ಪರಿಚಯಿಸಿಕೊಂಡು ನಮಗೆ ಬಂದ ವಿಷಯವನ್ನು ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಲು

ಕೇಳಿದಾಗ ಅವರು ಒಪ್ಪಿಕೊಂಡಿರುತ್ತಾರೆ. ಅವರನ್ನು ಸಹ ವಾಹನದಲ್ಲಿ ಕುರಿಸಿಕೊಂಡು ಹೊನ್ನಗೌಡನದೊಡ್ಡಿ ಕ್ರಾಸ್ ಬಳಿ ಬಂದಾಗ ಚಾಸಾ 1 ಅವರ ಸಿಬ್ಬಂದಿಯೊಂದಿಗೆ ಹಾಜರಿರುತ್ತಾರೆ. ನಂತರ ಪೆಟ್ಟಿಗೆ ಅಂಗಡಿಯನ್ನು ನಾವು ಶೋಧನೆ ಮಾಡಲು ಶೋಧನಾ ವಾರೆಂಟ್ ನ್ಯಾಯಾಲಯದಿಂದ ಪಡೆಯಲು ಮತ್ತು ಸಾಕ್ಷಿ ನಾಶ ಮಾಡವ ಸಂಬವ ಇದ್ದು ಮತ್ತು ಕಾಲಾವಕಾಶ ಇಲ್ಲದ ಕಾರಣ ನಾನು ಕರ್ನಾಟಕ ಅಭಕಾರಿ ಕಾಯ್ದೆ 1965 ಕಲಂ 54 ರಂತೆ ಸ್ಥಳದಲ್ಲಿಯೇ ಶೋಧನಾ ವಾರೆಂಟ್ ತಯಾರಿಸಿ ಪಂಚರ ಸಹಿ ಪಡೆದು ನಾವುಗಳು ಪರಸ್ಪರ ಅಂಗ ಶೋದನೆ ಮಾಡಿಕೊಂಡು ಪೆಟ್ಟಿಗೆ ಅಂಗಡಿಯನ್ನು ಪ್ರವೇಶಿಸಿರುತ್ತೇವೆ.

ಪೆಟ್ಟಿಗೆ ಅಂಗಡಿಯನ್ನು ಪರಿಶೀಲಿಸಲಾಗಿ ಪೆಟ್ಟಿಗೆ ಅಂಗಡಿಯ ಮರದ ಶೋಕೆಷ ಕೆಳಗೆ 1 ಬಿಳಿ ಚೀಲ ಇದ್ದು ಅದನ್ನು ತೆಗೆದು ನೋಡಲಾಗಿ180 ಎಂ.ಎಲ್. 2 ರ್ಯಾಡಿಕೋ 8 ಪಿಎಂ ಕಂಪನಿಯ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು, 90 ಮೀಲಿಯ 2 ಓಟಿ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು, 90 ಮೀಲಿಯ 4 ನಂ 1 ಎಂ.ಸಿ ಬ್ರಾಂಡಿಯ ಟೆಟ್ರಾ ಪ್ಯಾಕೇಟ್ ಗಳು ಇದ್ದು ನಂತರ ಫ್ರಿಡ್ಜ ಮೇಲ್ಬಾಗ 500 ಮೀಲಿಯ ಕಿಂಗ್ ಫೀಷರ್ ಸ್ಟ್ರಾಂಗ್ ಬಿಯರ್ ನ 1 ಟೀನ್ ಮತ್ತು 330 ಮೀಲಿಯ ಕಿಂಗ್ ಫೀಷರ್ ಸ್ಟ್ರಾಂಗ್ ಬಿಯರ್ ನ 2 ಟೀನ್ ಗಳು ಕಂಡು ಬಂದಿರುತ್ತವೆ. ಈ ಬಗ್ಗೆ ಆಸಾಮಿಗೆ ಮದ್ಯವನ್ನು ಹೊಂದಿ ಮಾರಾಟ ಮಾಡಲು ಯಾವುದಾದರೂ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಸದರಿ ಆಸಾಮಿಯ ತಾನು ಹಿಂದಿನ ದಿನ 90 ಮೀಲಿಯ ಮತ್ತು 180 ಮೀಲಿಯ 35 ರಿಂದ 40 ಟೆಟ್ರಾ ಪ್ಯಾಕೇಟ್ ಗಳನ್ನು ಮತ್ತು ಬಿಯರ್ ಬಾಟಲಗಳನ್ನು ಹು.ದುರ್ಗದ ಬೇರೆ ಬೇರೆ ಅಂಗಡಿಗಳಿಂದ ತಂದು ಮಾರಾಟ ಮಾಡಿದ್ದು ಉಳಿದ 8 ಟೆಟ್ರಾ ಪ್ಯಾಕೇಟಗಳು ಮತ್ತು 3 ಬಿಯರ್ ಬಾಟಲಗಳು ಇರುವುದಾಗಿ ತಿಳಿಸಿರುತ್ತಾನೆ. ಇವುಗಳನ್ನು ಹೊಂದಲು ಮತ್ತು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆ

ನಂತರ ಸದರಿ ಆಸಾಮಿಗೆ ಈ ರೀತಿ ಅಕ್ರಮವಾಗಿ ಮದ್ಯ ಮಾರಾಟ ಮತ್ತು ಸಾಗಾಟ ಮಾಡುವುದು ಹೊಂದುವುದು ಕರ್ನಾಟಕ ಅಭಕಾರಿ ಕಾಯ್ದೆಯ ಅಡಿಯಲ್ಲಿ ಅಪರಾದವೆಂದು ತಿಳಿಸಿದ್ದು ನಂತರ ಆತನ ಹೆಸರು ವಿಳಾಸ ವಿಚಾರಿಸಲಾಗಿ ಸೋಮಶೇಖರ ತಂದೆ ರಾಮಣ್ಣ 23 ವರ್ಷ ಹೊನ್ನೆಗೌಡನದೊಡ್ಡಿ ಎಂದ ತಿಳಿಸಿರುತ್ತಾನೆ.

ನಂತರ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನುಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಇಲಾಖಾ ಸೀಲ್ ಸಂ 157 ಅನ್ನು ಹಾಕಲಾಯಿತು. ನಂತರ ಮಾದರಿ ಸಹಿ ಮತ್ತು ಮಾದರಿ ಸೀಲಿನ ನಕಲು ತಯಾರಿಸಿ ಅವುಗಳನ್ನು ಮು. ಮಾ. ಗಳಿಗೆ ಅಂಟಿಸಲಾಯಿತು. ನಂತರ ಸ್ಥಳದಲ್ಲಿ ಮಹಜರನ್ನು ತಯಾರಿಸಿ ಪಂಚರ ಮತ್ತು ಲೋಕಾಯಕ್ತ ಅಧಿಕಾರಿಗಳ ಸಹಿ ಪಡೆದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಾಗಿ ಹೇಳಿರುತ್ತೇವೆ. ಮಹಜರನ್ನು 6.45 ರಿಂದ 7.45 ಗಂಟೆಯವರೆಗೆ ಮಾಡಿ ಸರ್ಕಾರಿ ವಾಹನದ ಹೆಡ್ ಲೈಟ ದೀಪದ ಸಹಾಯದಿಂದ ಬರೆದು ಮುಗಿಸಲಾಯಿತು. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**